ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು) :

ಅ), ಆ) ಮತ್ತು ಇ) ಸರ್ಕಾರದ ವರ್ಗಾವಣೆ ನೀತಿಯನ್ನು ದಿನಾಂಕ :22-11-2001ರ ಆದೇಶದಲ್ಲಿ ಪ್ರಕಟಿಸಲಾಗಿದೆ. ಈ ಆದೇಶದ ಪ್ರಕಾರ ಪತಿ-ಪತ್ನಿಯರಲ್ಲಿ ಒಬ್ಬರು ಸರ್ಕಾರಿ ನೌಕರರಾಗಿದ್ದು ಇನ್ನೊಬ್ಬರು ಖಾಸಗಿ ಉದ್ಯೋಗದಲ್ಲಿದ್ದರೆ ಅಂತಹ ಪತಿ-ಪತ್ನಿಯರು ಒಂದೆಡೆ ಕಾರ್ಯನಿರ್ವಹಿಸಲನುವಾಗುವಂತೆ ವರ್ಗಾವಣೆ ಮಾಡಲು ಅವಕಾಶವನ್ನು ಕಲ್ಪಿಸಿಲ್ಲ. ಇಂತಹ ಅವಕಾಶವನ್ನು ಕಲ್ಪಿಸುವ ಪ್ರಸ್ತಾವನೆಯು ಸರ್ಕಾರದಲ್ಲಿರುವುದಿಲ್ಲ.

ಶಾಸಕರ ಪ್ರದೇಶಾಭಿವೃದ್ಧಿ ನಿಧಿ ಬಿಡುಗಡೆಯ ಬಗ್ಗೆ

2619(3204) ಶ್ರೀ ಮೋಹನ್ ಕೆ. ಶೆಟ್ಟಿ (ಕುಮುಟ) : ಮಾನ್ಯ ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಾಸಕರ ಪ್ರದೇಶಾಭಿವೃದ್ಧಿ ನಿಧಿಯನ್ನು ಪ್ರತಿ ವರ್ಷ ರೂ. 40 ಲಕ್ಷ ನೀಡುವುದಾಗಿ ಸನ್ಮಾನ್ಯ ಮುಖ್ಯ ಮಂತ್ರಿಗಳು ಘೋಷಿಸಿದ್ದು ಇದರಿಂದ ಕ್ಷೇತ್ರದ ಅಭಿವೃದ್ಧಿಗಾಗಿ 2002-2003ನೇ ಸಾಲಿನಲ್ಲಿ ಕೇವಲ ರೂ. 10 ಲಕ್ಷ ಮಾತ್ರ ಬಿಡುಗಡೆಯಾಗಿದ್ದು, ಬಾಕಿ ಉಳಿದ ಹಣ ರೂ. 30 ಲಕ್ಷ ಹಾಗೂ 2003-04ನೇ ಸಾಲಿನಲ್ಲಿ ನೀಡಬೇಕಾದ ರೂ. 40 ಲಕ್ಷ ನೀಡಲು ಸರ್ಕಾರ ಕೈಗೊಂಡ ಕ್ರಮಗಳಾವುವು;

ಆ) ಸದರಿ ನಿಧಿಯನ್ನು ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀ ಆರ್.ಬಿ. ತಿಮ್ಮಾಪೂರ್ (ಯೋಜನಾ ಸಚಿವರು) :

ಅ) 2002-03ನೇ ಆರ್ಥಿಕ ವರ್ಷ ಮುಕ್ತಾಯಗೊಂಡಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಪರಿಸ್ಥಿತಿಯನ್ನಾಧಾರಿಸಿ 2003-04ನೇ ಸಾಲಿನಲ್ಲಿ ಹಣ ಬಿಡುಗಡೆ ಮಾಡಲಾಗುವುದು.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಅಬ್ಕಾರಿ ಹರಾಜಿನಿಂದ ಬಂದ ಹಣ

2621(3170) ಶ್ರೀ ನೀಲಕಂಠಪ್ಪ ಬಿ.ಆರ್ (ತರೀಕೆರೆ) : ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಅಬ್ಕಾರಿ ಇಲಾಖೆಯಿಂದ 2000-01, 2001-02 ಹಾಗೂ 2002-03ನೇ ವರ್ಷದಲ್ಲಿ ಅಬ್ಕಾರಿ ಇಲಾಖೆಯಿಂದ ಬಂದ ಹಣವೆಷ್ಟು;

ಆ) ಇದರಲ್ಲಿ, ತೆರಿಗೆಯನ್ನು ಕಟ್ಟದೇ ಇರುವವರು ಯಾರು ಅವರಿಂದ ವಸೂಲಿಗೆ ಏನು ಕ್ರಮ ಕೈಗೊಂಡಿದೆ;

ಇ) ಜಿಲ್ಲೆಯಲ್ಲಿ ಎಷ್ಟು ಸಿಎಲ್-1, ಸಿಎಲ್-2, ಸಿಎಲ್-3, ಕೇಂದ್ರಗಳಿವೆ; ಅವುಗಳಿಂದ ಬಂದ ಹಣವೆಷ್ಟು?

ಶ್ರೀ ಎಂ.ಎಂ. ನಾಣಯ್ಯ (ಅಬಕಾರಿ ರಾಜ್ಯ ಸಚಿವರು) :

ಅ) 2000-01 – ರೂ. 37,29,65,594/-

2001-02 – ರೂ. 41,32,45,661/-

2002-03 – ರೂ. 43,32,42,378/-

ಆ) 2000-01ನೇ ಸಾಲಿಗೆ ಸಂಬಂಧಿಸಿದಂತೆ ಯಾವುದೇ ಬಾಕಿ ಇರುವುದಿಲ್ಲ.